<u>**ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್ ಸಿ, ಹುಬ್ಬಳ್ಳಿ.**</u>

**MVC 689-22** **PW : 2**

**ಸತ್ಯ ಪ್ರತಿಜ್ಞೆ ಮೇರೆಗೆ ದಿನಾಂಕಃ 17.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರ ಪರ ಶ್ರೀ M V S, ವಕೀಲರಿಂದಃ**

**ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ದಾಖಲಿಸಿದ್ದು, ಅದಲ್ಲಿರುವ ಸಂಗತಿಗಳು ಸತ್ಯ ಹಾಗೂ ಸರಿ ಇರುತ್ತವೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರಪಡಿಸಿದ್ದೇನೆ.**

K M C R I, Hubballi ರವರು ಮುಸ್ತಾಕ ಅಲಿ ನಬಿಸಾಬ ನದಾಫ ರವರ ಕಳಿಸಿಕೊಟ್ಟ ವೈದ್ಯಕೀಯ ದಾಖಲೆಗಳನ್ನು ನಿಪಿ.19 ಎಂದು ಗುರುತಿಸಲಾಯಿತು.

ಮೆಡಿಕಲ್ ಬೋರ್ಡದವರು ಕೊಟ್ಟ ಅಂಗನ್ಯೂನ್ಯತೆ ಪ್ರಮಾಣ ಪತ್ರ ನಿಪಿ.20 ಎಂದು, ಸಾಕ್ಷಿ ಸಹಿ ನಿಪಿ.20-ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಎದುರುದಾರ ಪರ ಶ್ರೀ ಆರ್ ಆರ್ ಎನ್, ವಕೀಲರಿಂದಃ**

ನನಗೆ ಸಾಕ್ಷಿ ನುಡಿಯಲು ಅಧಿಕಾರ ಪತ್ರವಿಲ್ಲ. ಅರ್ಜಿದಾರನಿಗೆ ಯಾವುದೇ ಮೂಳೆ ಮುರಿತ ಆಗಿಲ್ಲ. Degloving injury ಆಗಿದೆ. Right leg low limb ರಲ್ಲಿ ಆಗಿದೆ. ಅರ್ಜಿದಾರನಿಗೆ ನರ ತೊಂದರೆಯಿಂದ ಪಾದ ಮೇಲೆ ಮಾಡಲು ಆಗುವುದಿಲ್ಲ (Foot drop) ಆಗಿದೆ. ನರದಿಂದ ಆದ ಗಾಯ ಕೆಲವೊಂದು ಬಾರಿ ಗುಣಮುಖವಾಗಬಹುದು ಕೆಲವು ಬಾಗಿ ಗುಣಮುಖವಾಗದೆ ಇರಬಹುದು. 3 ವರ್ಷಗಳವಾದ ನಂತರ ಪರಿಶೀಲನೆ ಮಾಡಬೇಕಾಗುತ್ತದೆ. ಒಂದು ವೇಳೆ 3 ವರ್ಷಗಳಲ್ಲಿ ಗುಣಮುಖವಾಗದೆ ಇದ್ದರೂ ಶಾಶ್ವತ ಅಂಗನ್ಯೂನ್ಯತೆ ಆಗುತ್ತದೆ. ಈಗ ಸಧ್ಯ ಶಾಶ್ವತ ಅಂಗನ್ಯೂನ್ಯತೆ ಅಲ್ಲ. ಈಗ ಚಾಲಕನಾಗಿ ಕೆಲಸ ಮಾಡಲು ಆಗುವುದಿಲ್ಲ. ಚಾಲಕ ವೃತ್ತಿ ಮಾಡಬಹುದು, ಆದರೆ ತೊಂದರೆಯಾಗುತ್ತದೆ. ಅರ್ಜಿದಾರನಿಗೆ ಪಾದ ಮೇಲೆ ಮಾಡಲು ಆಗುವುದಿಲ್ಲ, ಅದನ್ನು ಹೊರತುಪಡಿಸಿದರೆ ಬೇರೆ ಕೆಲಸ ಮಾಡಬಹುದು. ನಡೆಯಲು ಸಹ ತೊಂದರೆಯಾಗುತ್ತದೆ. ಸರಕಾರದ ನಿಯಮದ ಪ್ರಕಾರ ಅಂಗನ್ಯೂನ್ಯತೆ ಪ್ರಮಾಣ ಪತ್ರ ನೀಡಿದ್ದೇವೆ, ಸದರಿ ನಿಯಮಗಳನ್ನು ಲಗತ್ತ ಮಾಡಿಲ್ಲ. ನಮ್ಮ ಅನುಭವದ ಆಧಾರದ ಮೇಲೆ ಶೇಕಡಾ 40 ರಷ್ಟು ಅಂಗನ್ಯೂನ್ಯತೆ ಆಗಿದೆ ಎಂದು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಯಮಗಳ ಪ್ರಕಾರ ಮಾಡಿದ್ದೇವೆ. ಗಾಯಾಳುವಿಗೆ ಸಹಾಯವಾಗಲು ಹೆಚ್ಚಿನ ಅಂಗನ್ಯೂನ್ಯತೆ ಕೊಟ್ಟಿದ್ದೇನೆ ಅಂದರೆ ಸರಿಯಲ್ಲ.

**MVC 689-22** **PW : 2**

ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪಿನ ಪ್ರಕಾರ ಒಟ್ಟಾರೆ ದೇಹದ ಭಾಗಕ್ಕೆ ಅಂಗನ್ಯೂನ್ಯತೆ ಶೇಕಡಾ 1/4 ರಷ್ಟು ಅಂದರೆ, 1/3 ರಷ್ಟು ಆಗಬಹುದು.

**ಮರು ವಿಚಾರಣೆಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೆ.ಸ.ಎ. ಒಪ್ಪಿಕೊಳ್ಳಲಾಯಿತು.

(ಯಮನಪ್ಪ ಕರೆಹನುಮಂತಪ್ಪ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಂ ಎಫ್ ಸಿ, ಹುಬ್ಬಳ್ಳಿ.